15726 114 4RR 23/12

## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ. ಮಾದೇಗೌಡ ಇವರು ನಿಯಮ 72 ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಹೇಳಿಕೆ:

---------

**ವಿಷಯ:** ಪಂಚಾಯತ್ ರಾಜ್ ಇಂಜಿನಿಯರಿಂಗ್, ಮಂಡ್ಯ ವಿಭಾಗದಿಂದ ಅದೇ ಕಚೇರಿಯ 'ಡಿ' ಗ್ರೂಪ್ ನೌಕರನ ಖಾತೆಗೆ 3.51 ಕೋಟಿ ರೂಪಾಯಿ ಅಕ್ರಮವಾಗಿ ವರ್ಗಾವಣೆಯಾದ ಪ್ರಕರಣವನ್ನು ಸಿಐಡಿ ಹಾಗೂ ಇಲಾಖಾ ಹಂತದಲ್ಲಿ ತನಿಖೆ / ವಿಚಾರಣೆಗೆ ಆದೇಶಿಸಿ ನಾಲ್ಕೈದು ವರ್ಷಗಳೇ ಕಳೆದರೂ ಪ್ರಕರಣದ ತನಿಖೆಯನ್ನು ಅಂತಿಮಗೊಳಿಸಲು ಸಾಧ್ಯವಾಗಿಲ್ಲ. 2010-11 ರಿಂದ 2019 ರ ಅವಧಿಯಲ್ಲಿ ಆರ್ಥಿಕ ಅಕ್ರಮಗಳ ಈ ಪ್ರಕರಣ ನಡೆದಿದ್ದು 11 ಮಂದಿ ಅಧಿಕಾರಿ / ನೌಕರರ ಲೋಪವಿದೆ ಎನ್ನಲಾಗಿದೆ. ಅಕ್ರಮವಾಗಿ ವರ್ಗಾವಣೆಯಾದ ಬೃಹತ್ ಪ್ರಮಾಣದ ಹಣವನ್ನು ಬ್ಯಾಂಕ್‌ಗಳಿಂದ ಹಿಂಪಡೆಯುವ ಸಲುವಾಗಿ ಗ್ರಾಹಕರ ಪರಿಹಾರ ಆಯೋಗ ಇಲ್ಲಿ ಅರ್ಜಿ ದಾಖಲಿಸಲು ಸೂಚನೆ ನೀಡಿದ್ದರೂ ಪಾಲನೆಯಾಗಿಲ್ಲ. ಈವೊಂದು ಅಕ್ರಮದಲ್ಲಿ ಬ್ಯಾಂಕ್ ಸಿಬ್ಬಂದಿಗಳೂ ಭಾಗಿಯಾಗಿದ್ದಾರೆ ಎನ್ನಲಾಗಿದ್ದು ಅವರ ವಿರುದ್ಧವೂ ಕ್ರಮವಾಗಿಲ್ಲ. ಪ್ರಕರಣದ ತನಿಖೆ / ವಿಚಾರಣೆ ಆಮೆಗತಿಯಲ್ಲಿ ಸಾಗಿದ್ದು ಆರೋಪಿಗಳು ನಿರುಮ್ಮಳರಾಗಿದ್ದಾರೆ. ಹಾಗಾಗಿ, ಈ ಗಂಭೀರ ವಿಷಯ ಕುರಿತು ನಿಯಮ-72 ರಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಗಮನ ಸೆಳೆಯಬಯಸುತ್ತೇನೆ.

*****

**ಉತ್ತರ:**

ಮಂಡ್ಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಚೇರಿಯಲ್ಲಿ ಹಣ ದುರುಪಯೋಗವಾಗಿದ್ದು ಹಲವಾರು ಬ್ಯಾಂಕ್‌ಗಳಿಗೆ ನೀಡಿರುವ ಚೆಕ್‌ಗಳಲ್ಲಿ ಶ್ರೀ ಪ್ರಕಾಶ್ ಗೋಪಾಲಕೃಷ್ಣ ಪವಾರ್, ಹಿಂದಿನ ಕಾರ್ಯಪಾಲಕ ಇಂಜಿನಿಯರ್ ಮತ್ತು ಇತರೆ 09 ಜನ ಅಧಿಕಾರಿ / ನೌಕರರು ಹಣ ಪಡೆದಿರುವುದು, ವಿಭಾಗ ಕಚೇರಿಯ ಗ್ರೂಪ್-ಡಿ ನೌಕರರ ವೈಯಕ್ತಿಕ ಖಾತೆಗೆ ಹಣ ಜಮೆಯಾಗಿರುವುದು, ನಗದು ಪುಸ್ತಕ ನಿರ್ವಹಿಸದಿರುವುದು, ಹಲವಾರು ಬ್ಯಾಂಕ್ ಖಾತೆಗಳ ಮಾಹಿತಿಯನ್ನು ವಿಭಾಗ ಕಚೇರಿಯಲ್ಲಿ ನಿರ್ವಹಿಸದಿರುವುದು ಇತ್ಯಾದಿ ಗಂಭೀರ ಸ್ವರೂಪದ ಆರೋಪಕ್ಕೆ ಸಂಬಂಧಿಸಿದಂತೆ ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ / ನೌಕರರ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣವನ್ನು ಸರ್ಕಾರವು ಆದೇಶ ಸಂಖ್ಯೆ: ಒಇ/65/ಸಿಓಡಿ/2020, ದಿನಾಂಕ:23.12.2020 ರಲ್ಲಿ ಸಿ.ಐ.ಡಿ.ಗೆ ವಹಿಸಲಾಗಿರುತ್ತದೆ. ಸಿ.ಐ.ಡಿ.ರವರು ಪ್ರಕರಣದ ತನಿಖೆ ನಡೆಸುತ್ತಿದ್ದು, ತನಿಖೆಗೆ ಎಲ್ಲಾ ದಾಖಲಾತಿಗಳನ್ನು ಒದಗಿಸಲಾಗಿದೆ. ಸಿ.ಐ.ಡಿ. ಯಿಂದ ಮಾನ್ಯ ನ್ಯಾಯಾಲಯದಲ್ಲಿ ದೋಷಾರೋಪಣಾ ಪಟ್ಟಿ (Charge Sheet) ಸಲ್ಲಿಸುವುದನ್ನು ನಿರೀಕ್ಷಿಸಲಾಗಿದೆ.

ಈ ಪ್ರಕರಣದಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಲು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 101 ಇಎನ್‌ಕ್ಯೂ 2019 ದಿನಾಂಕ: 29.01.2022 ರಲ್ಲಿ ಪ್ರಕರಣದ ವಿಚಾರಣೆ ನಡೆಸಲು ಶ್ರೀ ಜಿ.ಎಸ್. ಸೋಮಶೇಖರ್, ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ಹಾಗೂ ಕಾರ್ಯಪಾಲಕ ಇಂಜಿನಿಯರ್, ಯೋಜನಾ ವಿಭಾಗ, ಬೆಂಗಳೂರು ಗ್ರಾಮಾಂತರ ಇವರನ್ನು ಮಂಡನಾಧಿಕಾರಿಗಳನ್ನಾಗಿ ನೇಮಿಸಲಾಗಿರುತ್ತದೆ. ವಿಚಾರಣೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಈ ಪ್ರಕರಣದಲ್ಲಿ ಪದೇ ಪದೇ ಸಾಕ್ಷಿಗಳು ಗೈರು ಹಾಜರಾಗುತ್ತಿರುವುದರಿಂದ ಇಲಾಖಾ ವಿಚಾರಣೆ ವಿಳಂಬವಾಗುತ್ತಿದ್ದು, ಈ ವಿಳಂಬವನ್ನು ತಪ್ಪಿಸಲು ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 101 ಇಎನ್ 2019. ದಿನಾಂಕ: 01.07.2023 ರನ್ವಯ ಪ್ರಕರಣದಲ್ಲಿನ ಆರೋಪಗಳ ಕುರಿತು ಸಾಕ್ಷಿಗಳಿಂದ ಹೇಳಿಕೆ ಪಡೆಯುವ ಉದ್ದೇಶಕ್ಕಾಗಿ ಹಾಗೂ ಹಾಜರಾತಿ ಪಡಿಸಲು Karnataka Departmenatal Inquires (Enforcement of Attendence of Witteness, Production of Documents and Miscellaneous Provision) ACT, 1981ರ ಸೆಕ್ಷನ್ 5 ರಲ್ಲಿ ನಿಗದಿಪಡಿಸಿರುವ ಅಧಿಕಾರವನ್ನು ಚಲಾಯಿಸಲು ಸದರಿ ಕಾಯ್ದೆಯ ಸೆಕ್ಷನ್ 4 ರ ಅನುಸಾರ ಶ್ರೀ ಜಿ.ಎಸ್. ಸೋಮಶೇಖರ್, ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರಿಗೆ ಅಧಿಕಾರ ನೀಡಿ ಆದೇಶಿಸಿದೆ. ದಿನಾಂಕ:28.11.2025ರ ಸರ್ಕಾರದ ಪತ್ರದಲ್ಲಿ ಒಂದು ತಿಂಗಳೊಳಗಾಗಿ ವಿಚಾರಣೆಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ವಿಚಾರಣಾ ವರದಿಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಪೊಲೀಸ್ ನಿರೀಕ್ಷಕರು, ಸಿ.ಐ.ಯು. ವಿಭಾಗ, ಸಿ.ಐ.ಡಿ. ಮೈಸೂರುರವರ ಪತ್ರ ದಿನಾಂಕ: 23.07.2025 ರಲ್ಲಿ ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಶ್ರೀ ಬಿ. ರಮೇಶ್, ಪ್ರಥಮ ದರ್ಜೆ ಸಹಾಯಕರು ಇವರ ವಿರುದ್ಧ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ, 1988 ಕಲಂ 17(ಎ) ರಿತ್ಯಾ ಪೂರ್ವಾನುಮತಿ ನೀಡುವಂತೆ ಕೋರಿರುತ್ತಾರೆ. ಅದರಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯ ಆದೇಶ ಸಂಖ್ಯೆ:ಪ್ರ.ಇಂ/ಪಂ.ರಾ.ಇಂ.ಇ/ಸಿ-15/ಪ್ರ.ದ.ಸ/ಭ್ರಷ್ಟಾಚಾರ ತನಿಖೆ / 2025-25/901, ದಿನಾಂಕ: 08.08.2025 ರಲ್ಲಿ ಸದರಿಯವರ ವಿರುದ್ಧ ತನಿಖೆ / ವಿಚಾರಣೆ ಕೈಗೊಳ್ಳಲು ಪೂರ್ವಾನುಮತಿ ನೀಡಿ ಆದೇಶಿಸಲಾಗಿರುತ್ತದೆ.

ದುರುಪಯೋಗವಾದ ಹಣವನ್ನು ಬ್ಯಾಂಕುಗಳಿಂದ ಹಿಂಪಡೆಯುವ ಸಂಬಂಧ ಸರ್ಕಾರದ ನಿರ್ದೇಶನದಂತೆ ಗ್ರಾಹಕರ ಪರಿಹಾರ ಆಯೋಗ, ಬೆಂಗಳೂರು ಇಲ್ಲಿ ಬ್ಯಾಂಕ್‌ಗಳ ವಿರುದ್ಧ ದೂರು ದಾಖಲಿಸುವ ಸಂಬಂಧ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯ ಇವರು M/S. Balarama Law Firm, Advocate & Solicitors, Bangalore-560002 ಎಂಬ ಸಂಸ್ಥೆಯನ್ನು ನೇಮಿಸಿಕೊಂಡಿದ್ದು, ಸದರಿ ಸಂಸ್ಥೆಯವರು ಬ್ಯಾಂಕ್‌ಗಳ ವಿರುದ್ಧ ಪ್ರಕರಣ ದಾಖಲಿಸಲು ಬ್ಯಾಂಕ್‌ಗಳಿಂದ ಆಗಿರುವ ಲೋಪ ದೋಷಗಳ ಬಗ್ಗೆ ಸ್ಪಷ್ಟ ಹಾಗೂ ನಿರ್ದಿಷ್ಟವಾದ ಸಾಕ್ಷ್ಯಾಧಾರಗಳನ್ನು ಒದಗಿಸುವಂತೆ ಮೌಖಿಕವಾಗಿ ತಿಳಿಸಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ತನಿಖೆಯನ್ನು ಸಿ.ಐ.ಡಿ. ಸಂಸ್ಥೆಯವರು ನಡೆಸುತ್ತಿದ್ದು, ಸದರಿ ತನಿಖಾ ವರದಿಯನ್ವಯ ಮತ್ತು ದಾಖಲಾತಿಗಳ ಆಧಾರದ ಮೇಲೆ ಗ್ರಾಹಕರ ಪರಿಹಾರ ಆಯೋಗ, ಬೆಂಗಳೂರು ಇಲ್ಲಿ ಪ್ರಕರಣ ದಾಖಲಿಸಲು ಕ್ರಮ ವಹಿಸಬೇಕಾಗಿರುವುದರಿಂದ ಸಿ.ಐ.ಡಿ. ಅಂತಿಮ ವರದಿಯನ್ನು ನಿರೀಕ್ಷಿಸಲಾಗಿದೆ. ವರದಿ ಸ್ವೀಕೃತವಾದ ಕೂಡಲೇ ಸದರಿ ವರದಿಯ ಆಧಾರದ ಮೇಲೆ ಗ್ರಾಹಕರ ಪರಿಹಾರ ಆಯೋಗ, ಬೆಂಗಳೂರು ಇಲ್ಲಿ ಪ್ರಕರಣ ದಾಖಲಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಗ್ರಾಅಪ 437 ಜಡ್‌ಪಿಎ 2025 (ಇ)

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್
ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು